**<u>1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**

**<u>Spl.C.101/2023</u>**

ದಿನಾಂಕ 18.12.2025
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

ಚಾಸಾ - 2 ಪ್ರಾಸಾ -2

| | | |
|---|---|---|
| ಹೆಸರು | ಃ | ರಾಜೇಗೌಡ |
| ತಂದೆಯ ಹೆಸರು | ಃ | ಮುನಿಮಾರೇಗೌಡ |
| ವಯಸ್ಸು | ಃ | 57 ವರ್ಷ |
| ಉದ್ಯೋಗ | ಃ | ಸಮಾಜಸೇವಕ |
| ವಾಸಸ್ಥಳ | ಃ | ತಟಗುಪ್ಪೆ, ಕನಕಪುರ ತಾಲ್ಲೂಕು. |

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

ಪ್ರಾಸಾ 1 ಶಿವರುದ್ರಯ್ಯ ನನಗೆ ಗೊತ್ತು. ಪ್ರಾಸಾ 1 ರವರು ಆದಿ ಕರ್ನಾಟಕ ಜಾತಿಗೆ ಸೇರಿದವರಾಗಿರುತ್ತಾರೆ. ಚಾಸಾ 3 ರಿಂದ 8 ನನಗೆ ಗೊತ್ತು. ಅವರು ನಮ್ಮ ಊರಿನವರೇ ಆಗಿರುತ್ತಾರೆ. ನ್ಯಾಯಾಲಯದ ಮುಂದಿರುವ 1 ಮತ್ತು 2ನೇ ಆರೋಪಿ ನನಗೆ ಗೊತ್ತು. ಅವರು ಕೂಡ ನಮ್ಮ ಊರಿನವರೇ ಆಗಿದ್ದು, ಒಕ್ಕಲಿಗ ಜಾತಿಗೆ ಸೇರಿದವರಾಗಿರುತ್ತಾರೆ. ಆರೋಪಿಗಳಿಗೆ ಪ್ರಾಸಾ 1 ಆದಿ ಕರ್ನಾಟಕ ಜಾತಿಗೆ ಸೇರಿದವನು ಎಂದು ಗೊತ್ತಿರುತ್ತದೆ.

2. ದಿನಾಂಕ 22.03.2023 ರಂದು ಸಂಜೆ 6.30 ಗಂಟೆಗೆ ನಾನು ಪ್ರಾಸಾ 1 ಕ್ಕೆ ಮಾರಮ್ಮನ ದೇವಸ್ಥಾನದ ಬಳಿ ಬರುವಂತೆ ಕರೆದೆ. ನನ್ನ ಅತ್ತೆಗೆ ಹುಷಾರಿಲ್ಲದ ಕಾರಣ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ದೇವಸ್ಥಾನದ ಬಳಿ ಬಂದೆ. ಅಲ್ಲಿಗೆ ಕುಳ್ಳಣ್ಣ ಬರಬೇಕಾಗಿದ್ದು, ನಾನು ಕಾಯುತ್ತಾ ನಿಂತಿದ್ದೆ. ಆಗ ಶಿವರಾಜು ಮತ್ತು ನಿಥಿಲಾಕ್ಷಾ ತಮ್ಮ ಜಮೀನು ಕಡೆಯಿಂದ ದ್ವಿಚಕ್ರ ವಾಹನದಲ್ಲಿ ಬಂದು, ಪ್ರಾಸಾ 1 ಕ್ಕೆ ಏಕಾಏಕಿ ಬೋಳಿ ಮಗನೇ,

ಹೊಲೆಯ, ಇಲ್ಲಿ ನಮ್ಮ ದೇವಸ್ಥಾನದ ಬಳಿ ಯಾಕೆ ಬಂದಿದ್ದೀಯಾ ಎಂದು ಹೇಳಿ ಏಕಾಏಕಾ ಪ್ರಾಸಾ 1 ಕ್ಕೆ ಹೊಡೆಯುತ್ತಿದ್ದರು. ತುಂಬಾ ಕ್ರಿಟಿಕಲ್ ಆಗಿ ಹೊಡೆಯುತ್ತಿದ್ದರು. ಆಗ ನಿಥಿಲಾಕ್ಷಾ ಪ್ರಾಸಾ 1 ರವರ ಮೊಬೈಲ್ ನ್ನು ಎತ್ತಿಕೊಂಡು ಕಲ್ಲಿನ ಮೇಲೆ ಹೊಡೆದ. ಶಿವರಾಜು ಕಲ್ಲು ತೆಗೆದುಕೊಂಡು ಪ್ರಾಸಾ 1 ಶಿವರುದ್ರಯ್ಯನ ಮೇಲೆ ಎತ್ತಿ ಹಾಕಲು ಹೋದಾಗ ನಾನು ಬಿಡಿಸಿದೆ. ರಾಮಶೆಟ್ಟಿಯನ್ನು ಕರೆದುಕೊಂಡು ನಮ್ಮ ಜಮೀನಿನ ಮೇಲೆ ಕೇಸ್ ಹಾಕಿಸಿದ್ದೀಯಾ, ನಮ್ಮ ಜಮೀನಿನ ಮೇಲೆ ನರೇಗಾ ಕೆಲಸ ನೀನೇ ಮಾಡಿಸಿದ್ದೀಯಾ ಎಂದು ಹೇಳಿ ನಿನ್ನ ಫ್ಯಾಮಿಲಿಯನ್ನು ಪೆಟ್ರೋಲ್ ಹಾಕಿ ಸುಟ್ಟು ಹಾಕುತ್ತೇವೆ ಎಂದು ಹೇಳಿ ಆರೋಪಿಗಳು ಪ್ರಾಸಾ 1 ಕ್ಕೆ ಹೊಡೆಯುತ್ತಲೇ ಇದ್ದು, ಪ್ರಾಸಾ 1 ಎದ್ದುಬಿದ್ದು ಓಡುತ್ತಿರಬೇಕಾದರೆ, ಆರೋಪಿಗಳು ಪ್ರಾಸಾ 1 ನ್ನು ಓಡಿಸಿಕೊಂಡು ಹೋದರು. ಪ್ರಾಸಾ 1 ಶಿವರುದ್ರಯ್ಯನ ಬಟ್ಟೆ ಹರಿದಿತ್ತು. ಸದರಿ ಬಟ್ಟೆ, ಮೊಬೈಲ್ ಮತ್ತು ಕಲ್ಲನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಅವುಗಳನ್ನು ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆಮಾಲು 1 ರಿಂದ 3 ಎಂದು ಗುರುತಿಸಲಾಗಿದೆ.

**ವಾಟೀ ಸವಾಲುಃ ಆರೋಪಿಗಳ ಪರವಾಗಿ ಕುಮಾರಿ ಎಸ್.ಎಸ್. ವಕೀಲರು ಶ್ರೀ.ಎಂ.ಕೆ. ವಕೀಲರ ಪರವಾಗಿ ಸಮಯಾವಕಾಶ ಕೋರಿದ್ದು, ತನ್ನ ಹಿರಿಯ ವಕೀಲರಿಗೆ ಕಾಲಿಗೆ ಏಟಾಗಿರುವ ಕಾರಣ ನಡೆದಾಡಲು ಆಗುವುದಿಲ್ಲ, ಆ ಕಾರಣ ಗೈರು ಹಾಜರಿರುವತ್ತಾರೆ ಎಂದು ಸಮಾಯವಕಾಶ ಕೋರಿರುವ ಕಾರಣ ಸಾಕ್ಷಿಯ ಭತ್ಯೆವನ್ನು ಬರೆಸುವಂತೆ ಆದೇಶಿಸಿ ವಾಟೀಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ.)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/

ವಿಶೇಷ ನ್ಯಾಯಾಧೀಶರು,
ರಾಮನಗರ.